ನಾನು ಕೇಳುವುದೇನೆಂದರೆ, ಬೆಳೆ ವಿಮಾ ಯೋಜನೆ ನೀರಾವರಿ ಪಂಪು ಸೆಟ್ಟುಗಳು ಇರುವ ಭೂಮಿಗೂ ಸೌಲಭ್ಯ ಇವೆಯೇ ? ಒಣ ಬೇಸಾಯಕ್ಕೆ ಈ ಸೌಲಭ್ಯ ಕೊಡುತ್ತಿದ್ದರೆ, ಎಲ್ಲೆಲ್ಲಿ ಈ ಸೌಲಭ್ಯಗಳನ್ನು ವಿಸ್ತರಿಸಿದ್ದೀರಿ ಯಾವ ಯಾವ ಜಿಲ್ಲೆಯಲ್ಲಿ ಇದುವರೆಗೆ ಕೊಟ್ಟಿದ್ದೀರಿ ಎನ್ನುವ ಬಗ್ಗೆ ಮಾಹಿತಿ ಕೊಟ್ಟರೆ ಒಳ್ಳೆಯದು.

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಅಧ್ಯಕ್ಷರೇ, ಇನ್ನು ಮುಂದೆ ಎಲ್ಲೆಲ್ಲಿ ಬೆಳೆ ವಿಮೆಯನ್ನು ಕೊಡಲಾಗುತ್ತದೆ ಎಂಬ ವಿಷಯವನ್ನು ಶಾಸಕರುಗಳ ಗಮನಕ್ಕೆ ತರತಕ್ಕ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಯು. ಭೂಪತಿ.—ಇದು ಒಂದು ಕಡೆ ಇರುವ ಸಮಸ್ಯೆಯಲ್ಲ. ಇದು ರಾಜ್ಯದ ಸಮಸ್ಯೆ. ಇದು ಪ್ರಾಮುಖ್ಯವಾದ ಸಮಸ್ಯೆ. ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಗೆ ಉತ್ತರವೇ ಬರಲಿಲ್ಲ.

ಅಧ್ಯಕ್ಷರು.—ದಯವಿಟ್ಟು ತಾವು ಕುಳಿತುಕೊಳ್ಳಿ,

ಶ್ರೀ ಆರ್. ವೆಂಕಟರಾಮಯ್ಯ.—ಇದರ ಬಗ್ಗೆ ಉತ್ತರ ಕೊಡಬೇಕು. ಇದು ರಾಜ್ಯಕ್ಕೆ ಸಂಬಂಧಪಟ್ಟ ಪ್ರಶ್ನೆ.

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ ನಾನು ಪರವಾನಿಗಿಯನ್ನು ಮಾಡುವುದಿಲ್ಲ.

ಶ್ರೀ ಆರ್. ಎಲ್, ಜಾಲಪ್ಪ.—ಈ ವಿಷಯದಲ್ಲಿ, ಕೇಂದ್ರ ಸರ್ಕಾರದವರ ಒಂದು ಪಾಲಿಸಿ, ಮೇಲೆ ನಾವು ಇನ್‌ಶೂರೆನ್ಸ್ ಪ್ರೀಮಿಯಮ್‌ನ್ನು ತೆಗೆದುಕೊಳ್ಳುತ್ತೇವೆ. ಬೆಳೆ ವಿಮೆ ಕೊಡುವ ಬಗ್ಗೆ ಕೇಂದ್ರ ಸರ್ಕಾರದ ನೀತಿ ಏನೆಂದರೆ, ಒಂದು ಊರಿನಲ್ಲಿ ಯಾರಾದರೂ ಒಬ್ಬರಿಗೆ ಬೆಳೆ ಆಗದಿದ್ದರೆ, ಅವರಿಗೆ ವಿಮೆಯನ್ನು ಕೊಡುವುದಿಲ್ಲ. ಊರಿನಲ್ಲಿರುವ ಯಾರಿಗೂ ಬೆಳೆ ಆಗಿದಿದ್ದರೆ ಮಾತ್ರ ಬೆಳೆ ವಿಮೆಯನ್ನು ಕೊಡುವುದಕ್ಕೆ ಕೇಂದ್ರ ಸರ್ಕಾರದ ನೀತಿ ಇದೆ. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರೂ ಸಹ ಈಗಾಗಲೇ ಕೇಂದ್ರ ಸರ್ಕಾರಕ್ಕೆ ಕಾಗದ ಬರೆದಿದ್ದಾರೆ.

ಮುಧೋಳ ತಾಲ್ಲೂಕು ಇಂಗಳಗಿ ಗ್ರಾಮದ ಸರ್ಕಾರಿ ಪ್ರೌಢ ಶಾಲೆ ಕಟ್ಟಡ.

೧೯೦. ಶ್ರೀ ಬಿ. ಜಿ. ಜವಳಿಂಡಿ (ಮುಧೋಳ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮುಧೋಳ್ ತಾಲ್ಲೂಕು ಇಂಗಳಗಿ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯನ್ನು ಯಾವಾಗ ಮಂಜೂರು ಮಾಡಲಾಯಿತು ?

ಆ) ಸದರಿ ಶಾಲಾ ಕಟ್ಟಡ ಶಿಥಿಲಗೊಂಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಡಿ. ವಂಜುನಾಥ್ (ಶಿಕ್ಷಣ ಮಂತ್ರಿಗಳು).—

ಅ) ೧೯೭೦ ರಲ್ಲಿ ಟಿ.ಡಿ.ಬಿ. ಯವರು ಶಾಲೆಯನ್ನು ಪ್ರಾರಂಭಿಸಿ ನಂತರ ೧೯೭೩ ರಲ್ಲಿ ಸರ್ಕಾರ ವಹಿಸಿಕೊಂಡಿದೆ.

ಆ) ಬಂದಿದೆ.

ಇ) ಬಿಜಾಪುರ ಜಿಲ್ಲಾಧಿಕಾರಿಗಳು ಈ ಶಾಲೆಯ ದುರಸ್ತಿಗಾಗಿ ೮ನೇ–೮ನೇ ರಲ್ಲಿ ರೂ. ೩೦,೦೦೦–೦೦ ರೂಪಾಯಿಗಳನ್ನು, ೮೪–೮೫ರಲ್ಲಿ ರೂ ೩೪,೦೦೦–೦೦ ರೂಪಾಯಿಗಳನ್ನು ಮಂಜೂರು ಮಾಡಿದ್ದರು. ಆದರೆ ಲೋಕೋಪಯೋಗಿ ಇಲಾಖೆಯವರು ಈ ಕೆಲಸಕ್ಕೆ ಕರೆದ ಟೆಂಡರ್‌ಗೆ ಯಾರೂ ಉತ್ತರಿಸಲಿಲ್ಲ ವೆಂದು ತಿಳಿದು ಬಂದಿದೆ. ಲಭ್ಯವಿರುವ ಯೋಜನೆಯ ಅಡಿಯಲ್ಲಿ ಹೊಸದಾಗಿ ನಿರ್ಮಿಸಲು ಜಿಲ್ಲಾಧಿಕಾರಿಯವರನ್ನು ಕೋರಲಾಗಿದೆ.

ಶ್ರೀ ಬಿ. ಜಿ. ಜವಳಿಂಡಿ.—ಮಾನ್ಯ ಅಧ್ಯಕ್ಷರೇ, ಇಂಗಳಗಿ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯನ್ನು ೧೯೭೦ ರಲ್ಲಿ ಟಿ.ಡಿ.ಬಿ.ಯವರು ಕಟ್ಟಿಸುವುದಕ್ಕೆ ಪ್ರಾರಂಭಿಸಿದರು. ನಂತರ ೧೯೭೩ ರಲ್ಲಿ ಈ ಶಾಲೆಯ ಕಟ್ಟಡವನ್ನು ಕಟ್ಟುವುದಕ್ಕೆ ಲೋಕೋಪಯೋಗಿ ಇಲಾಖೆಯವರು ಅಧಿಕಾರವನ್ನು ವಹಿಸಿಕೊಂಡರು. ಕಟ್ಟಡವನ್ನು ಕಟ್ಟಲಾಗಿದೆ. ಆದರೆ ಈ ಕಟ್ಟಡವು ಈಗ ಶಿಥಿಲಗೊಂಡಿದೆ. ಈ ಶಿಥಿಲ

ಗೊಂಡ ಕಟ್ಟಡವನ್ನು ಪುನಃ ಕಟ್ಟುವ ಕಡೆ ಯಾವ ಅಧಿಕಾರಿಗಳೂ ಗಮನ ಕೊಟ್ಟಿಲ್ಲ. ಇದುವರೆಗೂ ಈ ಕಟ್ಟಡದಲ್ಲಿ ಶಾಲೆಯನ್ನು ಪ್ರಾರಂಭ ಮಾಡಲಾಗಿಲ್ಲ. ಸುಮಾರು ೧೬ ವರ್ಷಗಳಿಂದ ಈ ಕಟ್ಟಡವನ್ನು ಸರಿಯಾಗಿ ಕಟ್ಟಲಿಲ್ಲವೆಂದರೆ, ಶಾಸಕರಾಗಿ ನಾವು ಆ ಊರಿನ ಜನರಿಗೆ ಮುಖ ತೋರಿಸುವ ಹಾಗಿಲ್ಲ. ಇದರ ಬಗ್ಗೆ ಜಿಲ್ಲಾಧಿಕಾರಿಗಳಪರಿಗೆ ನಾನು ತಿಳಿಸಿದಾಗ ಅವರು, ಈ ಕಟ್ಟಡವನ್ನು ಕಟ್ಟುವುದಕ್ಕೆ ಪುನಃ ೩ಳ ಸಾವಿರ ರೂಪಾಯಿಗಳನ್ನು ಮಂಜೂರು ಮಾಡಲಾಗಿದೆ ಎಂದು ತಿಳಿಸಿದ್ದರು. ಹಿಂದೆ ಇದ್ದ ಶಿಕ್ಷಣ ಸಚಿವರಿಗೂ ಇದರ ಬಗ್ಗೆ ಮನವಿಯನ್ನು ಮಾಡಿಕೊಂಡಿದ್ದೆ, ಅವರಿಂದಲೂ ಸರಿಯಾದ ಉತ್ತರ ಇದುವರೆಗೂ ಬಂದಿಲ್ಲ. ಈಗಲಾಗರೂ ಶಿಕ್ಷಣ ಮಂತ್ರಿಯವರು ಈ ಕಡೆ ಗಮನ ಹರಿಸಿ ಈ ಶಾಲೆಯ ಕಟ್ಟಡವನ್ನು ಕಟ್ಟಿಸಿಕೊಡಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ಮಂಜುನಾಥ್.—ಮಾನ್ಯ ಅಧ್ಯಕ್ಷರೇ, ಈ ಕಟ್ಟಡದ ಮೇಲ್ವಿಚಾರಣೆಯನ್ನು ೧೯೭೩ನೇ ಇಸವಿಯಲ್ಲಿ ಸರ್ಕಾರ ವಹಿಸಿಕೊಂಡಿದೆ. ಈ ಕಟ್ಟಡವನ್ನು ಈಗ ರಿಪೇರಿ ಮಾಡುವುದಕ್ಕಾಗುವುದಿಲ್ಲ ವಾದ್ದರಿಂದ ಹೊಸದಾಗಿಯೇ ಕಟ್ಟಡವನ್ನು ಕಟ್ಟಬೇಕಾಗಿರುತ್ತದೆ. ಈಗಾಗಲೇ ನಾನು ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಗಳಿಗೆ ತಿಳಿಸಿದ್ದೇನೆ. ಈ ಕಟ್ಟಡವನ್ನು ಕಟ್ಟುವುದಕ್ಕೆ ಎಷ್ಟು ಹಣ ಬೇಕೋ ಅದನ್ನು ಒದಗಿಸುವುದಕ್ಕೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್.—ಸ್ವಾಮಿ, ನಾನು ಪ್ರಶ್ನೆಯನ್ನು ತಮ್ಮಲ್ಲಿ ಕೇಳಿದ್ದೇನೆ. ಅದಕ್ಕೆ ಕೊಟ್ಟ ಉತ್ತರವನ್ನು ಕೇಳಿದ್ದಾಯಿತು. ಈ ಕುರಿತು ವಿಚಾರ ಮಾಡಿದರೆ ಎಷ್ಟು ತ್ವರಿತ ರೀತಿಯಿಂದ ಕಾರ್ಯಕ್ರಮಗಳು ಆಗಬೇಕಾಗಿದೆ ಎಂಬ ವಿಚಾರದಲ್ಲಿ, ತಾವು ಈ ಸದನಕ್ಕೆ ಕೊಟ್ಟ ಆಶ್ವಾಸನೆಯನ್ನು ಗಮನಿಸಿದರೂ ಕೂಡ ಯಾವ ರೀತಿಯಿಂದ ಕಾರ್ಯಗಳು ಆಗಬೇಕಾಗಿತ್ತೋ ಆ ರೀತಿಯಲ್ಲಿ ಆಗಿಲ್ಲ. ಅದಕ್ಕೆ ಕಾರಣಗಳು ಏನು ಎಂದು ನಾನು ಹುಡುಕಲಿಕ್ಕೆ ಹೋಗುವುದಿಲ್ಲ. ನಮ್ಮ ಭಾಗದ ಕೃಷ್ಣ ನೀರನ್ನು ಪೂರ್ಣವಾಗಿ ಕ್ರಿ ಶ. ೨೦೦೦ ವರ್ಷದೊಳಗಾಗಿ ಬಳಸಿಕೊಳ್ಳಲು ಯೋಜನೆಯನ್ನು ರೂಪಿಸಿಕೊಳ್ಳಲಾಗಿದೆ ಎಂದು ಹೇಳಿದ್ದೀರಿ. ಇಂತಹ ಹೇಳಿಕೆಗಳನ್ನು ೧೯೭೨ ರಿಂದಲೂ ಹೇಳಿಕೊಂಡು ಬಂದಿದ್ದಾರೆ. ನಾಲ್ಕು ವರ್ಷಗಳ ಕಾಲ ತಡವಾದರೆ ಸುಮ್ಮನೆ ಇರಬಹುದು. ಆದರೆ ಈಗ ಪರಿಸ್ಥಿತಿಯ ಬೇರೆಯಾಗಿದೆ. ತೆಲುಗುಗಂಗಾ ಯೋಜನೆಯಲ್ಲಿ ಆಂಧ್ರಪ್ರದೇಶದವರು ನಮ್ಮ ಹಕ್ಕನ್ನು ಮೊಟಕು ಗೊಳಿಸುವುದಕ್ಕೆ ಏನು ಮಾಡಬೇಕೋ ಅದನ್ನೆಲ್ಲಾ ಮಾಡಿದ್ದಾರೆ, ನೀವು ನಿಮ್ಮ ಒಂದು ನಿಲುವನ್ನು ಆ ಕುರಿತು ಉತ್ತರದಲ್ಲಿ ತಿಳಿಸಿದ್ದೀರಿ. ಅದಕ್ಕೂ ಅರ್ಥ ಇದೆ. ಆದರೆ, ನಾವು ನೀವು ಇಲ್ಲಿ ಬಡಿದಾಡಿಕೊಂಡು ಕುಳಿತರೆ, ಆದರಿಂದ ಜನತೆಗೆ ತೊಂದರೆಯಾಗುತ್ತದೆ, ತೆಲುಗು ಗಂಗಾ ಯೋಜನೆಯಲ್ಲಿ ಅವರು ಕಟ್ಟಿದಂತಹ ಅಣೆಕಟ್ಟನ್ನು ಕಟ್ಟಿದ ಬಗ್ಗೆ ನೀವು ಏನು ಲೀಗಲ್ ಆಕ್ಷನ್ ತೆಗೆದುಕೊಂಡಿದ್ದೀರಿ ? ಆಂಧ್ರಪ್ರದೇಶದ ಮುಖ್ಯಮಂತ್ರಿಯವರು ತಮ್ಮ ಕಾರ್ಯವನ್ನು ಬಾಯಲ್ಲಿ ಹೇಳಿಕೊಂಡಿದ್ದಾರೆ. ಕೇಂದ್ರ ಸರ್ಕಾರದವರು ಕರ್ನಾಟಕದ ಹಿತವನ್ನು ಗಮನಿಸಿ, ಕೆಲಸವನ್ನು ಮಾಡುತ್ತಿದ್ದಾರೆಯೇ ಎಂಬ ಬಗ್ಗೆ ಸ್ಪಷ್ಟವಾದ ಒಂದು ನಿಲುವನ್ನು ತಾವುಗಳು ತಾಳಿದ್ದರೆ, ಅದರ ಬಗ್ಗೆ ಏನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ ? ಎರಡನೆಯದಾಗಿ ೨೦೦೦ ವರ್ಷದೊಳಗಾಗಿ ನೀರನ್ನು ಸಂಪೂರ್ಣವಾಗಿ ಬಳಸಿಕೊಳ್ಳಲಿಕ್ಕೆ ಯೋಜಿಸಲಾಗಿದೆ ಎಂದು ಹೇಳಿದ್ದೀರಿ, ಆ ದಿಸೆಯಲ್ಲಿ ಬಜೆಟ್‌ನ್ನು ಬಳಸಿಕೊಳ್ಳಲಿಕ್ಕೆ ತಾವುಗಳು ಏನಾದರೂ ಯೋಜನೆಯನ್ನು ಮಾಡಿದ್ದೀರಾ ?

ಶ್ರೀ ಎಚ್. ಡಿ. ದೇವೇಗೌಡ.—ತೆಲುಗು ಗಂಗಾ ಯೋಜನೆಯ ವಿಚಾರದಲ್ಲಿ ಲೀಗಲ್ ಆಕ್ಷನ್ ಏನು ತೆಗೆದುಕೊಳ್ಳಲಾಗಿದೆ ಎಂದು ಮಾನ್ಯ ಕೆ. ಎಚ್. ಪಾಟೀಲ್‌ರವರು ಕೇಳಿದ್ದಾರೆ. ಇಂತಹ ವಿಷಯಗಳಲ್ಲಿ ಉಲ್ಲಂಘನೆ ಆದಾಗ ಸಂಬಂಧಪಟ್ಟಂತಹವರ ಮೇಲೆ ಕ್ರಮ ತೆಗೆದುಕೊಳ್ಳುವಂತಹ ಅಧಿಕಾರ ಕೇಂದ್ರ ಸರ್ಕಾರದವರಿಗೆ ಇದೆ ಇದರ ಬಗ್ಗೆ ಟ್ರಿಬ್ಯುನಲ್ ಆದಮೇಲೆ, ಸಂಬಂಧಪಟ್ಟಂತಹ ರಾಜ್ಯಗಳು ಅದನ್ನು ಅನುಷ್ಠಾನಕ್ಕೆ ತರತಕ್ಕಂಥಾದ್ದರಲ್ಲಿ ಅಸಹಕಾರ ಮನೋಭಾವನೆಯನ್ನು ತಾಳುವುದಾದರೆ, ಅವರ ಮೇಲೆ ಯಾವುದೇ ಕ್ರಮ ಕೈಗೊಳ್ಳುವ ಅಧಿಕಾರ ಕೇಂದ್ರ ಸರ್ಕಾರಕ್ಕೆ ಇದೆ. ಆ ಕೆಲಸವನ್ನು ಮಾಡಬೇಕೆಂದು ಕೇಂದ್ರ ಸರ್ಕಾರವನ್ನು ಪದೇ ಪದೇ ಕೇಳಿಕೊಂಡಿದ್ದೇವೆ. ಸ್ಕೀಮ್ ''ಬಿ'' ನೋಟಿಫಿಕೇಷನ್ ಆಗಿಲ್ಲ. ಅದನ್ನು ಮಾಡುವ ಅಧಿಕಾರವೂ ಕೇಂದ್ರ ಸರ್ಕಾರಕ್ಕೆ ಇದೆ. ಅದನ್ನು ಮಾಡಬೇಕೆಂದು ಕೇಳಿಕೊಂಡಿದ್ದೇವೆ. ಹಾಗೆಯೇ ತೆಲುಗು ಗಂಗಾ ಯೋಜನೆಗೆ ಕ್ಲಿಯರೆನ್ಸ್ ಕೊಡಕೊಡದು ಎಂದು ನಾವು ಕೇಂದ್ರ ಸರ್ಕಾರದವರನ್ನು ಕೇಳಿಕೊಂಡಿದ್ದೇವೆ.

ಶ್ರೀ ಕೆ. ಎಚ್. ಪಾಟೀಲ್.—ಈಗ ಕೇಂದ್ರ ಸರ್ಕಾರದವರು ಒಂದು ವೇಳೆ ಲೀಗಲ್ ಒಪೀನಿಯನ್ ತಿಳಿದುಕೊಂಡರೂ ಸಹ ಸುಮ್ಮನೇ ಕ್ರಮತೆಗೆದುಕೊಳ್ಳದೆ ಕುಳಿತುಕೊಂಡಿದ್ದಾರೆ, ಅವರ ಮೇಲೆಯೂ ಕ್ರಮತೆಗೆದುಕೊಳ್ಳಿ, ನಮಗೆ ಒಟ್ಟಿನಲ್ಲಿ ಬೇಕಾದುದು ರಾಜ್ಯದ ಹಿತರಕ್ಷಣೆ. ಇವೊತ್ತಿನ ದಿವಸ ಆಂಧ್ರಪ್ರದೇಶದವರು ಕಟ್ಟುತಕ್ಕಂತಹ ತೆಲುಗು ಗಂಗಾ ಯೋಜನೆಯಿಂದಾಗಿ ನಮ್ಮ ಹಿತಕ್ಕೆ ಧಕ್ಕೆ ಬರುತ್ತದೆ. ರಾಜ್ಯದ ಜನತೆಯ ಹಿತರಕ್ಷಣೆ ಮಾಡತಕ್ಕಂಥಾದ್ದು ತಮ್ಮ ಕರ್ತವ್ಯವಾಗಿದೆ. ಜನತೆಯು ನಿಮ್ಮಲ್ಲಿ ಇಟ್ಟ ವಿಶ್ವಾಸವನ್ನು ನೀವುಗಳು ಪರಿಪಾಲನೆ ಮಾಡುತ್ತೀರಾ ? ಇವೊತ್ತು ನೀವು ಕೊಟ್ಟ ಹಣ ದಲ್ಲಿ ಆ ಯೋಜನೆಯು ಆಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳ ಜೊತೆಗೆ ಮಾತನಾಡಿ, ಇನ್ನೂ ಹೆಚ್ಚು ಹಣವನ್ನು ಈ ಯೋಜನೆಗೆ ಹೂಡಲಿಕ್ಕೆ ತಾವುಗಳು ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ಡಿ. ದೇವೇಗೌಡ.—ಇದಕ್ಕಾಗಿ ಇನ್ನೂ ಹೆಚ್ಚು ಹಣವನ್ನು ಕೊಡತಕ್ಕಂತಹ ನಿರ್ಣಯವನ್ನು ಮಾಡಿದ್ದೇವೆ. ಹೆಚ್ಚು ಹಣವನ್ನು ಕೊಡತಕ್ಕಂತಹ ದಿಕ್ಕಿನಲ್ಲಿ ನಾವು ಪ್ರಾಮಾಣಿಕ ಪ್ರಯತ್ನವನ್ನು ನಡೆಸಿದ್ದೇವೆ. ಈ ವಿಚಾರದಲ್ಲಿ ಮಾನ್ಯ ಸದಸ್ಯರು ಒಪ್ಪಿಗೆ ಸೂಚಿಸುತ್ತಾರೆಂದು ನಾನು ಭಾವಿಸಿದ್ದೇನೆ. ಹಿಂದಿನ ವೆಚ್ಚಕ್ಕೆ ಹೋಲಿಸಿದರೆ, ಈಗ ನಾವು ಹೆಚ್ಚು ಮಾಡಿದ್ದೇವೆ ಎಂಬುದು ಕೂಡ ಮಾನ್ಯ ಸದಸ್ಯರಿಗೆ ಗೊತ್ತಿದೆ. ಎರಡನೆಯದಾಗಿ ಇದಕ್ಕಾಗಿ ಏನು ಹಣ ಕೊಟ್ಟಿದ್ದೇವೆ ಅದು ಸಾಕಾಗುವುದಿಲ್ಲ ಎಂದು ಹೇಳಿದ್ದಾರೆ.

ಶ್ರೀ ಕೆ. ಎಚ್. ಪಾಟೀಲ್.—ಎಷ್ಟು ಹಣ ಕಡಿಮೆ ಬೀಳುತ್ತದೆ, ಇದರ ಬಗ್ಗೆ ಸದನದ ಅಭಿಪ್ರಾಯವನ್ನು ಪಡೆಯುತ್ತೀರಾ ?

ಶ್ರೀ ಎಚ್. ಡಿ. ದೇವೇಗೌಡ.—ಇದರಲ್ಲಿ ರಾಜಕೀಯದ ಪ್ರಶ್ನೆ ಏನೂ ಇಲ್ಲ, ಸದನದ ೨೨೪ ಜನ ಸದಸ್ಯರಿಗೂ ಕೃಷ್ಣ ನೀರಿನ ಬಗ್ಗೆ ತೀವ್ರವಾದ ಕಳಕಳಿ ಇದೆ. ಇಲ್ಲಿ ರಾಜಕೀಯಂವಾಗಲೀ, ಅಧಿಕಾರದ ಪ್ರಶ್ನೆಯಾಗಲೀ, ಇರಕೂಡದು, ಎನ್ನತಕ್ಕಂತಹ ಮಾತನ್ನು ನಾನು ಸದನದಲ್ಲಿ ಹೇಳಬಯಸುತ್ತೇನೆ. ಕೇಂದ್ರ ಸರ್ಕಾರದವರ ಮೇಲೆ ಪ್ರಭಾವಬೀರತಕ್ಕಂತಹ ವಿಚಾರದಲ್ಲಿ ನಿಮ್ಮೆಲ್ಲರ ಸಹಕಾರವನ್ನು ಕೋರುತ್ತೇನೆ. ನಮಗೆ ಇರತಕ್ಕಂತಹ ಸದನದ ಅಧಿಕಾರದ ಚೌಕಟ್ಟಿನಲ್ಲಿ ನಾವು ಮಾತನಾಡುತ್ತೇವೆ. ಹಾಗೆಯೇ ಇನ್ನೊಂದು ರಾಜ್ಯ ಸದನದ ಬಗ್ಗೆ ನಾನು ಇಲ್ಲಿ ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ಆ ವಿಚಾರದಲ್ಲಿ ನಾನು ನನ್ನ ವ್ಯಾಪ್ತಿ ದಾಟಿ ಹೋಗಬಾರದು. ಅದೇ ರೀತಿಯಲ್ಲಿ ಒಂದು ಮಾತು ಈ ವಿಚಾರದಲ್ಲಿ ಕೇಂದ್ರ ಸರ್ಕಾರದವರು ನಿರ್ಣಯವನ್ನು ತೆಗೆದುಕೊಳ್ಳತಕ್ಕಂಥ ಸಮಯದಲ್ಲಿ ಯಾವುದೇ ಕಾರಣದಿಂದ ಈ ರಾಜ್ಯಕ್ಕೆ ಆಗಿರತಕ್ಕಂಥ ಅನ್ಯಾಯವನ್ನು ಅವರು ಗಮನ ದಲ್ಲಿಟ್ಟುಕೊಂಡು ಒಂದು ನಿರ್ಣಯವನ್ನು ಮಾಡಬೇಕಾಗುತ್ತದೆ. ಇದರಲ್ಲಿ ಯಾವ ಸಂಬಂಧ, ಭಾಂಧವ್ಯವೂ ಇಲ್ಲ ಕರ್ನಾಟಕ ರಾಜ್ಯಕ್ಕೆ ಆಗಿರತಕ್ಕಂತಹ ಅನ್ಯಾಯವನ್ನು ಎಲ್ಲಾ ಪಕ್ಷದವರೂ ಭೇದವಿಲ್ಲದೆ ಇಟ್ಟುಕೊಂಡಿದ್ದಾರೆ. ನಮ್ಮ ಪ್ರಾಮಾಣಿಕ ಪ್ರಯತ್ನವನ್ನು ನಾವು ಮಾಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತೆಲುಗು ಗಂಗಾ ಕ್ಲೀಯರೆನ್ಸ್ ಆಗಬೇಕೆಂಬ ದೃಷ್ಟಿಯಿಂದ, ಅಲ್ಲಿನ ಪಾರ್ಲಿಮೆಂಟ್ ಸದಸ್ಯರು ಏನೇನು ನಡೆಸಿದ್ದಾರೆ, ಏನೇನು ನಡೆದಿದೆ ಎಂಬುದು ಇವೊತ್ತಿನ ದಿವಸ ನಾವು ಗಮನದಲ್ಲಿಟ್ಟುಕೊಳ್ಳಬೇಕು. ಅವರು ಎಷ್ಟರಮಟ್ಟಿಗೆ ಒತ್ತಡವನ್ನು ತರುತ್ತಿದ್ದಾರೆ ಎಂದರೆ, ಈ ವಿಚಾರವಾಗಿ ಮಾನ್ಯ ಶಂಕರಾನಂದ್‌ರವರು ಮಿಾಟಿಂಗ್‌ನ್ನು ಕರೆಸಿದಾಗ, ಇವರು ಕರ್ನಾಟಕ ರಾಜ್ಯದವರು ಅವರಿಂದ ತಮಗೆ ನ್ಯಾಯ ಸಿಗುವುದಿಲ್ಲ ಎಂದು ಒತ್ತಡ ತಂದು, ಪ್ರಾಜೆಕ್ಟ್‌ಗೆ ಕ್ಲೀಯರೆನ್ಸ್ ಪಡೆದುಕೊಳ್ಳತಕ್ಕಂತಹ ಮಟ್ಟಕ್ಕೆ ಅವರು ಹೋಗಿದ್ದಾರೆ ಇಂತಹ ಸಂದರ್ಭದಲ್ಲಿ ನೀವು ಆ ಪ್ರಯತ್ನಗಳನ್ನು ತಡೆಗಟ್ಟಲು ಏನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ ? ನೀರಿನ ಉಪಯೋಗವನ್ನು ಮಾಡಿಕೊಳ್ಳುತ್ತಿರುವ ಬಗ್ಗೆ ತಾವು ಒಪ್ಪಿಕೊಂಡು ಅದನ್ನು ಪದೇ ಪದೇ ಹೇಳುತ್ತಿದ್ದೀರಿ. ಯಾವ ರೀತಿಯಾಗಿ ಕಾವೇರಿ ಬೇಸಿನ್‌ನಲ್ಲಿ ನೀರನ್ನು ಉಪಯೋಗ ಮಾಡಿಕೊಳ್ಳಬೇಕೆಂದು ಮಾಡಿದ್ದೀರಿ, ಅದೇ ರೀತಿಯಲ್ಲಿ ದೊಡ್ಡ ಮನಸ್ಸು ಮಾಡಿ...

ಶ್ರೀ ಎಚ್. ಡಿ. ದೇವೇಗೌಡ,—ಅಧ್ಯಕ್ಷರೇ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾವು ಮಾತನಾಡಿದರೆ, ತಾವುಗಳು ಅದನ್ನು ರಾಜಕೀಯ ಎಂದು ಕರೆಯುತ್ತೀರಿ...

ಶ್ರೀ ಎಂ. ವೀರಪ್ಪ ಮೊಯ್ಲಿ.—They have particularly taken the entire national opposition into confidence. ಮಾನ್ಯ ಸಚಿವರು ಕೂಡ ಒಪ್ಪುತ್ತಾರೆ. ಕೃಷ್ಣಾಕ್ಕೆ ಹೆಚ್ಚು ಹಣವನ್ನು ಕೊಡಬೇಕೆಂಬುದನ್ನು ಎಲ್ಲರೂ ಒಪ್ಪುತ್ತಾರೆ. ಅದೇರೀತಿಯಲ್ಲಿ ಕಾವೇರಿಗೆ ತಾವುಗಳು ಹೆಚ್ಚಿಗೆ ಹಣವನ್ನು ಕೊಡುತ್ತಾ ಇದ್ದೀರಿ. ಇದರಲ್ಲಿ ಯಾವ ರೀತಿಯ ವಾದವೂ ಇಲ್ಲ. ಕಾವೇರಿಗೆ ತಾವುಗಳು ಯಾವ ತರಹದಲ್ಲಿ ಅಧ್ಯತೆಯನ್ನು ಕೊಡುತ್ತೀರೋ ಅದೇರೀತಿ ಕೃಷ್ಣಕ್ಕೂ ಕೊಡಬೇಕು. ತಮಗೆ ರಾಜಕೀಯವಾಗಿ ಇಲ್ಲಿ ಏನಾದರೂ ತೊಂದರೆ ಇದ್ದರೆ ಹೇಳಿ, ನಾವು ಸಪೋರ್ಟ್ ಮಾಡುತ್ತೇವೆ. Politically if you have some problem, you categorically tell us. Please let us know about it. These are the two demands placed by the national opposition on the floor of the Lok Sabha. ಏಕೆಂದರೆ, ನ್ಯಾಷನಲ್ ಪಾರ್ಟಿಯವರು ಎರಡು ಡಿಮಾಂಡ್ಸ್‌ನ್ನು ಇಟ್ಟರು. ಒಂದು, ಮಾನ್ಯ ಶಂಕರಾನಂದ್‌ರವರು ಅಪೋಲೋಜೈಸ್ ಮಾಡಬೇಕು, ಎರಡನೆಯದು, ಪೆಂಡಿಂಗ್ ಇರತಕ್ಕಂತಹ ತೆಲಂಗಾಣ ಗಂಗಾ ಪ್ರೊಜೆಕ್ಟ್‌ಗೆ ಕ್ಲೀಯರೆನ್ಸ್ ಕೊಡಬೇಕು ಎನ್ನುವುದು.

These are the two demands placed by the National Opposition on the Floor of the Lok Sabha. ಆದುದರಿಂದ ಈ ನ್ಯಾಷನಲ್ ಅಪೊಸಿಷನ್ ಪಾರ್ಟಿಯಲ್ಲಿ ನಿಮ್ಮಿದೂ ಒಂದು ಪ್ರಮುಖ ಪಕ್ಷವಾಗಿರುವುದರಿಂದ ತಾವು ಕರ್ನಾಟಕದಲ್ಲಿ ರಾಜಕೀಯ ಮಾಡುತ್ತೀರಿ, ರಾಜಕೀಯ ಅಂದರೆ ಅಡಳಿತ ಮಾಡುತ್ತಿದ್ದೀರಿ, ಆದುದರಿಂದ ತಾವು ಇದರ ಬಗ್ಗೆ ತಮ್ಮ ಸ್ಪಷ್ಟವಾದ ನಿಲುವು ಏನು ? ತಮ್ಮ ಸ್ಟ್ಯಾಂಡ್ ಏನು ಎನ್ನುವುದನ್ನು ಸ್ಪಷ್ಟಪಡಿಸಬೇಕು. ಅದನ್ನು ಫ್ಲೋರ್ ಆಫ್ ದಿ ಹೌಸ್‌ನಲ್ಲಿ ಹೇಳಬೇಕು. ಮಾನ್ಯ ದೇವೇಗೌಡರು ಏನು ಹೇಳುತ್ತಾರೆ ಅದನ್ನು ನಾನು ಒಪ್ಪುತ್ತೇನೆ. But the Chief Minister, what is his stand ? ಆದರ ಬಗ್ಗೆ ಅವರು ಕ್ಯಾಟಗಾರಿಕಲೆ ಇವೊತ್ತು ನೀವು ಹೇಳುತ್ತಾ ಇಲ್ಲ. ಆಂಧ್ರ ಪ್ರದೇಶದಲ್ಲಿ ಅವರು ಒಂದು ಹೇಳಿಕೆ ಕೊಟ್ಟಿದ್ದಾರೆ. ಇತ್ತೀಚೆಗೆ ಅದೂ ಬದಲಾವಣೆಯಾಗಿದೆ. ಅದರ ಬಗ್ಗೆ ನಿಮಗೆ ಸ್ವಲ್ಪ ಶಕ್ತಿ ಇದ್ದರೆ ಸ್ವಲ್ಪ ಫೈಟ್‌ಔಟ್ ಮಾಡಿ. ಈ ಕೃಷ್ಣ ನದಿ ನೀರಿನ ಬಗ್ಗೆ ಪೂರ್ಣವಾಗಿ ನೀರನ್ನು ಉಪಯೋಗಿಸಿಕೊಳ್ಳಲು ಇನ್ನೂ ಆಗಿಲ್ಲ. ಆಂಧ್ರ ಪ್ರದೇಶದವರು ನ್ಯಾಷನಲ್ ಅಪೊಸಿಷನ್‌ನವರನ್ನು ಪೂರ್ಣವಾಗಿ ವಿಶ್ವಾಸಕ್ಕೆ ತೆಗೆದುಕೊಂಡು ಈ ತೆಲುಗು-ಗಂಗಾ ಯೋಜನೆಯನ್ನು ಪ್ರಾರಂಭ ಮಾಡುವುದಕ್ಕೆ ಹೊರಟಿದ್ದಾರೆ. ಇದರಿಂದ ನಮ್ಮ ಕರ್ನಾಟಕಕ್ಕೆ ಲಾಸ್ ಆಗಿದೆ. ಅವರು ಇದರ ಬಗ್ಗೆ ನ್ಯಾಷನಲ್ ಲಾಬಿ ಮಾಡಿದ್ದಾರೆ. ನೀವೇನೋ ಈ ತೆಲುಗು-ಗಂಗಾ ಬಗ್ಗೆ ಸಂಪೂರ್ಣ ವಿರೋಧ ಮಾಡಿದ್ದೀರಿ. ಆದರೆ ಇದರ ಬಗ್ಗೆ ಆನ್ ದಿ ಫ್ಲೋರ್ ಆಫ್ ದಿ ಹೌಸ್ ಮತ್ತೆ ಹೊರಗೆ ನಿಮ್ಮ ಪಕ್ಷದ ಸ್ಟ್ಯಾಂಡ್ ಏನು ಎನ್ನುವುದನ್ನು ಸ್ಪಷ್ಟವಾಗಿ ತಿಳಿಸಬೇಕು. ಒಬ್ಬೊಬ್ಬರೂ ಒಂದೊಂದು ಧ್ವನಿಯಲ್ಲಿ ಹೇಳುವುದಾದರೆ ಇದರಿಂದ ಕರ್ನಾಟಕಕ್ಕೆ ಚ್ಯುತಿ ಬರುವ ಪ್ರಸಂಗ ಬರಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ನಾನು ಇದರ ಬಗ್ಗೆ ರಾಜಕೀಯ ಮಾಡಬೇಕು ಎನ್ನುವ ಉದ್ದೇಶ ಖಂಡಿತಾ ಇಲ್ಲ.

ಅಧ್ಯಕ್ಷರು.—ಪುನಃ ರಾಜಕೀಯ ಎನ್ನುವುದನ್ನು ಮಾತನಾಡಬೇಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ರಾಜಕೀಯ ಮಾಡಬೇಕೆನ್ನುವುದು ನಮ್ಮ ತಲೆಯಲ್ಲಿ ಇಲ್ಲ. ಅವರ ತಲೆಯಲ್ಲಿ ಏನು ಬಂದಿದೆಯೋ ಅದು ನನಗೆ ಗೊತ್ತಿಲ್ಲ. ಆಂಧ್ರ ಪ್ರದೇಶದವರು ಈ ಒಂದು ಯೋಜನೆ ಬಗ್ಗೆ ಬಹಳ ಆಸಕ್ತಿ ವಹಿಸಿ ಏನು ಒಂದು ರೂಪ ಕೊಟ್ಟಿದ್ದಾರೆ ಅದೇ ರೀತಿಯಾಗಿ ನೀವೂ ಕೂಡ ಆಸಕ್ತಿ ವಹಿಸಿ ಅದರ ಉಪಯೋಗವನ್ನು ೨೦೦೦ ಎ.ಡಿ. ವರೆಗೆ ಉಪಯೋಗ ಮಾಡಿಕೊಳ್ಳಿರಿ. ಇದುವರೆಗೆ ಅದನ್ನು ಉಪಯೋಗ ಮಾಡಿಕೊಳ್ಳಲಿಕ್ಕೆ ತಾವು ಏಕೆ ಆಸಕ್ತಿ ವಹಿಸಲಿಲ್ಲ ? ಈ ತೆಲುಗು-ಗಂಗಾ ಯೋಜನೆ ಬಗ್ಗೆ ಶ್ರೀ ಎನ್. ಟಿ. ರಾಮರಾವ್ ಅವರು ತಮ್ಮ ಪಕ್ಷದ ಎಂ.ಪಿ.ಗಳೇ ಅಲ್ಲದೆ ಬೇರೆ ಬೇರೆ ಪಕ್ಷದ ನಾಯಕರುಗಳನ್ನೂ ಸಹ ತಮ್ಮ ವಿಶ್ವಾಸಕ್ಕೆ ತೆಗೆದುಕೊಂಡು ಕೆಲಸ ಮಾಡುತ್ತಿದ್ದಾರೆ. ಇದರಿಂದ ನಮಗೆ ಬಹಳ ಅನ್ಯಾಯವಾಗಿದೆ. ಈ ತೆಲುಗು-ಗಂಗಾ ಪ್ರಾಜೆಕ್ಟನ್ನು ತೆಗೆದುಕೊಳ್ಳುವುದಕ್ಕೆ ತೆಲುಗು ದೇಶಂನವರು ಒಂದು ತರಹ ಅನ್ ಇಂಪೈಷನ್ ಕ್ರಿಯೇಟ್ ಮಾಡಿ ಏನು ಮಾಡಿದ್ದಾರೆ, ಅವರು ಯಾವ ರೀತಿಯಾಗಿ ಕಾರ್ಯಕ್ರಮ ಹಾಕಿಕೊಂಡಿದ್ದಾರೆ ಅದೇ ರೀತಿಯಾಗಿ

ನೀವು ಕಾರ್ಯಕ್ರಮ ಹಾಕಿಕೊಂಡು ಕೆಲಸ ಮಾಡಿ.ನವರ್ ಅನ್ಯಾಯವಾಗದೇ ಇರುವ ರೀತಿಯಲ್ಲಿ ನಾವು ನಡೆದುಕೊಳ್ಳುತ್ತೇವೆ ಎನ್ನುವುದನ್ನು ಸ್ಪಷ್ಟವಾಗಿ ಹೇಳಿ, ಇವರ ಬಗ್ಗೆ ರಾಜಕೀಯ ಮಾಡಬೇಕು ಎನ್ನುವ ಉದ್ದೇಶ ನಮಗೆ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೆ, ನನಗೆ ಏನು ಒಂದು ಆನುಮಾನ ಬಂದಿದೆ ಎಂದರೆ ಪತ್ರಿಕೆಗಳಲ್ಲಿ ಬಂದಿರುವ ವರದಿ ಪ್ರಕಾರ ಅವರು ಕ್ಲಿಯರೆನ್ಸ್ ಪಡೆಯದೇ ಈ ತೆಲುಗು-ಗಂಗಾ ಯೋಜನೆಗೆ ಅವರು ಕಾರ್ಯಕ್ರಮ ಹಾಕಿಕೊಂಡು ಚಾಲು ಮಾಡುತ್ತಿದ್ದಾರೆ ಎಂದು ಕೇಳಿದೆ. ಅವರು ಈ ಯೋಜನೆ ಬಗ್ಗೆ ಈಗಾಗಲೇ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ, ಹಣ ಖರ್ಚು ಮಾಡಿದ್ದಾರೆ. ಆ ಹಣ ಎಲ್ಲಿಂದ ಬಂತು ಎನ್ನುವುದೂ ಗೊತ್ತಿದೆ. ಇದರ ಬಗ್ಗೆ ತಮ್ಮ ಸ್ಪಷ್ಟವಾದ ನಿಲುವು ಏನು ಎನ್ನುವುದನ್ನು ಹೇಳಬೇಕು ?

ಎರಡನೆಯದಾಗಿ, ಮಾನ್ಯ ಪ್ರಧಾನ ಮಂತ್ರಿಯವರು ಸಂಬಂಧಪಟ್ಟ ಮುಖ್ಯ ಮಂತ್ರಿಗಳನ್ನು ಕರೆಯಿಸಿ ಮಾತನಾಡುತ್ತೇನೆ ಎನ್ನುವ ಅಭಿಪ್ರಾಯ ಪತ್ರಿಕೆಯಲ್ಲಿ ಬಂದಿದೆ. ಜೊತೆಗೆ ಪತ್ರಿಕಾ ವರದಿಗಾರರಿಂದ ಹೀಗೆ ಏನಾದರೂ ಹೇಳಿಸಿದ್ದಾರೋ ಏನೋ ಗೊತ್ತಿಲ್ಲ. ಪತ್ರಿಕಾ ವರದಿ ಪ್ರಕಾರ ತೆಲುಗು-ಗಂಗಾ ಯೋಜನೆ ಅವರು ಇಪ್ಪತ್ತು ಶರು ಮಾಡುವುದರಿಂದ ನಮಗೆ ಬಹಳ ಅನ್ಯಾಯವಾಗಿದೆ ಇದು ಬಹಳ ಗಂಭೀರವಾದ ಪ್ರಶ್ನೆ. ಈಗಾಗಲೇ ಇದರ ಬಗ್ಗೆ ನ್ಯಾಷನಲ್ ಅಪೋಸಿಷನ್‌ನಲ್ಲಿ ಅವರು ಮಾತನಾಡಿದ್ದಾರೆ. ಇದಕ್ಕೆ ತಾವು ಏನು ಮಾಡುತ್ತೀರಿ ಎನ್ನುವುದನ್ನು ಹೇಳುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ.—ಅವರೇನಾದರೂ ತೆಲುಗು-ಗಂಗಾ ಯೋಜನೆಯನ್ನು ಶರು ಮಾಡಿದ್ದಾರೆ ಅದನ್ನು ತಡೆಹಿಡಿಯುವುದರ ಪಾಲಂ ನಮ್ಮೆಲ್ಲರ ಮೇಲೆ ಬೀಳುತ್ತದೆ. ಅದನ್ನು ನಾವು ತಡೆಹಿಡಿಯುವುದಕ್ಕಾಗುವುದಿಲ್ಲ. ಬೇಕಾದರೆ ಒಬ್ಬ ಅಡ್ವೋಕೇಟ್ ಜನರಲ್ ಅವರನ್ನಾಗಲಿ ಅಥವಾ ಸುಪ್ರಸಿದ್ಧ ಕಾನೂನು ಪಂಡಿತರನ್ನಾಗಲಿ ಅದರ ಬಗ್ಗೆ ನೇಮಕ ಮಾಡೋಣ. ಕೇಂದ್ರ ಸರ್ಕಾರಕ್ಕೆ ಇರತಕ್ಕಂಥ ಅಧಿಕಾರವನ್ನು ನಾವು ಚಲಾಯಿಸುವುದಕ್ಕೆ ಆಗುವುದಿಲ್ಲ. ತಮ್ಮ ಗಮನಕ್ಕೆ ತರಬೇಕಾದರೆ ಹಿಂದೆ ಈ ಕಾವೇರಿ ಬೇಸಿನ್ ಶ್ರೀ ಕರುಣಾನಿಧಿಯವರು ಸುಪ್ರೀಂ ಕೋರ್ಟಿಗೆ ಹೋದಾಗ ಅವರು you can go to the Government of India ಎಂದು ಹೇಳಿದರು. ಅವಲ್ಲಾ ವಿಷಯಗಳನ್ನೂ. ಮತ್ತು ಆ ವಿವಾದಗಳನ್ನು ಈಗ ನಾನು ತೆಗೆದುಕೊಂಡು ಹೋಗುವುದಕ್ಕೆ ಸಿದ್ಧನಿಲ್ಲ. ಆದರೆ ನಾನು ಒಂದು ಮಾತು ಹೇಳುತ್ತೇನೆ. ಕರ್ನಾಟಕದವರು ಆ ನೀರನ್ನು ಉಪಯೋಗ ಮಾಡಿಕೊಳ್ಳಲಿಕ್ಕೆ ಸಾಧ್ಯವಿಲ್ಲ. ಆ ನೀರು ಸಮುದ್ರಕ್ಕೆ ಹರಿದು ಹೋಗುತ್ತದೆ ಎಂಬ ಅಭಿಪ್ರಾಯವನ್ನು ಆಂಧ್ರ ಪ್ರದೇಶದವರು ರಾಷ್ಟ್ರ ಮಟ್ಟದಲ್ಲಿ ಮಾಡಿಸುವುದು ಸಹಜ. ಅದನ್ನು ನಾನು ಒಪ್ಪಿಕೊಳ್ಳುತ್ತೇವೆ. ಆದರೆ ನಾನು ಇಷ್ಟು ಮಾತ್ರ ಹೇಳುತ್ತೇನೆ. ಟ್ರಿಬ್ಯೂನಲ್‌ನವರು ಆ ನೀರನ್ನು ಇಷ್ಟು ಕಾಲದೊಳಗೆ ಉಪಯೋಗ ಮಾಡಿಕೊಳ್ಳಬೇಕು ಎಂದು ಹೇಳಿದಾಗ, ಆ ಕಾಲದೊಳಗೆ ನಾವು ಉಪಯೋಗ ಮಾಡಿಕೊಳ್ಳದೇ ಹೋದಾಗ ಅವರು ಈ ಪ್ರಶ್ನೆ ಎತ್ತಬಹುದೇ ವಿನಹ ಈಗ ಅದನ್ನು ಎತ್ತುವುದಕ್ಕೆ ಸಾಧ್ಯವಿಲ್ಲ. ಅವರು ಈ ನೀರನ್ನು ಬಳಕೆ ಮಾಡಿಕೊಳ್ಳಿ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ನಮಗೆ ೨೦೦೦ ಎ.ಡಿ. ತನಕ ಆ ನೀರನ್ನು ಉಪಯೋಗಿಸಿಕೊಳ್ಳಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಇದರ ಬಗ್ಗೆ ಅವರು ಧರಣಿ ಕುಳಿತಿದ್ದಾಗ ಪ್ರಧಾನ ಮಂತ್ರಿಯವರು ನಾನು ಆಂಧ್ರ ಪ್ರದೇಶಕ್ಕೆ ಹೋಗಿ ನೋಡಿಂತ್ತೇನೆ, ಅದರ ಬಗ್ಗೆ ಪ್ರಯತ್ನ ಮಾಡುತ್ತೇನೆಂದು ಹೇಳಿರುವುದನ್ನು ಪತ್ರಿಕೆಯಲ್ಲಿ ಹೇಳಿಕೆ ಕೊಟ್ಟಿದ್ದಾರೆ. ಪ್ರಧಾನ ಮಂತ್ರಿಗಳು ಕರ್ನಾಟಕದ ಬಗ್ಗೆ, ಕರ್ನಾಟಕದಲ್ಲಿರುವ ಕೃಷ್ಣ ನದಿ ನೀರಿನ ಬಗ್ಗೆ, ಬರಗಾಲಕ್ಕೆ ತುತ್ತಾಗದಂಥ ಪ್ರದೇಶಗಳಿಗೆ ಪ್ರಧಾನಿಯವರು ಹಿಂದೆ ಭೇಟಿ ಕೊಟ್ಟಾಗ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಪ್ರಧಾನಿಯವರು ಆಂಧ್ರ ಪ್ರದೇಶಕ್ಕೆ ಹೋಗುವಾಗ, ಕರ್ನಾಟಕಕ್ಕೂ ಬಂದು ಇಲ್ಲಿ ನಾವು ಏನೇನು ಯೋಜನೆಗಳನ್ನು ಹಾಕಿಕೊಂಡಿದ್ದೇವೆ, ನಾವು ಏನೇನು ಮಾಡಿದ್ದೇವೆ ಎಂದು ಪ್ರತಿಯೊಂದನ್ನೂ ಪರಿಶೀಲನೆ ಮಾಡಿ ನೋಡಲಿ ಎಂದು ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದಿದ್ದಾರೆ. ಇದರಲ್ಲಿ ರಾಜಕೀಯವನ್ನು ತಡೆಗಟ್ಟಬೇಕು. ನಾನೂ ಕೂಡ ಅವರನ್ನು ಈ ಸದನದ ಮುಖಾಂತರ ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ. ಅವರು ಆಂಧ್ರ ಪ್ರದೇಶಕ್ಕೆ ಹೋಗುವಾಗ ಕರ್ನಾಟಕಕ್ಕೂ ಬರಲಿ. ಇಲ್ಲಿರುವ ಎಲ್ಲಾ ಯೋಜನೆಗಳನ್ನೂ ಪರಿಶೀಲನೆ ಮಾಡಲಿ. ಇದರಲ್ಲಿ ರಾಜಕೀಯ ಇದ್ದರೆ ಅದನ್ನು ತಡೆಗಟ್ಟುವುದಕ್ಕೆ ಇಡೀ ಸದನಕ್ಕೆ ಎಷ್ಟು ಕಳಕಳಿ ಇದೆಯೋ ಅಷ್ಟೇ ಕಳಕಳಿ ಸರ್ಕಾರಕ್ಕೂ ಇದೆ ಎಂದು ನಾನು ಈ ಸಂದರ್ಭ

ದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಂತ್ರಿಮಂಡಲ ನಾನು ಪ್ರಧಾನಿಯವರಲ್ಲಿ ರಿಕ್ವೆಸ್ಟ್ ಮಾಡುತ್ತೇನೆ. ಆಂಧ್ರ ಪ್ರದೇಶಕ್ಕೆ ಹೋಗುವ ದಿನ ಇಲ್ಲಿಗೂ ಅವರು ಬರಲಿ.

ಎರಡನೆಯದಾಗಿ ಆಂಧ್ರದವರು ಇದಕ್ಕೆ clearance ಕೊಡಲಿ or clearance ಕೊಡದೇ ಹೋದರೂ I am going to do the work ಎಂದು ಹೇಳುವುದಾದರೆ On behalf of the Government of Karnataka, I want to make one point very clear. ಅದೇನೆಂದರೆ ಅವರು ಸ್ಕೀಂ (ಬಿ) ಇನ್ನೂ ಪಬ್ಲಿಷ್ ಮಾಡಿಲ್ಲ. ಅವರು ಸ್ಕೀಂ (ಬಿ) ಪಬ್ಲಿಷ್ ಮಾಡಲಿ, ಮಾಡದೇ ಇರಲಿ ಅವರು ಕರ್ನಾಟಕದ ೪ ಕೋಟಿ ಜನತೆಗೆ ದ್ರೋಹ ಬಗೆಯುವುದಕ್ಕೆ ಸಾಧ್ಯವಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ. Even at the cost of whatever may be the othnr activities, we wanted to see that Scheme 'B" should also be taken up as a challenge to the Andhra people. We want to see that this entire water of Krisnna basin is properly used for the benifit of the people of the State.

ಅಧ್ಯಕ್ಷರು.—ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್, ನೀವು ಪ್ರಶ್ನೆಯನ್ನು ಕೇಳಿ.

ಶ್ರೀ ಬಿ. ಬಸವಲಿಂಗಪ್ಪ.—ತಾವು ಮುಂದಿನ ಪ್ರಶ್ನೆ ತೆಗೆದುಕೊಳ್ಳುವುದಕ್ಕೆ ಮುನ್ನ ನನ್ನದೊಂದು ಪ್ರಶ್ನೆ ಇದೆ, ಪ್ರಾಮಿಸ್ ಕೊಡತಕ್ಕಂಥ ಪ್ರಶ್ನೆ ಇದೆ.

ಅಧ್ಯಕ್ಷರು.—ನಾನು ಈಗಾಗಲೇ ಮುಂದಿನ ಪ್ರಶ್ನೆ ಕೇಳಲು ಕರೆದಿದ್ದೇನೆ. ಈಗ ಹಿಂದಿನದಕ್ಕೆ ಹೋಗುವ ಪ್ರಶ್ನೆಯೂ ಇಲ್ಲ, ಉತ್ತರವೂ ಇಲ್ಲ. ನಾನು ಮಾನ್ಯ ಬಂಗಾರಪ್ಪನವರಿಗೂ ಅವಕಾಶ ಕೊಟ್ಟಿಲ್ಲ. ಬೇರೆ ಯಾರಿಗೂ ಮತ್ತೆ ಕೇಳುವುದಕ್ಕೆ ಅವಕಾಶ ಕೊಟ್ಟಿಲ್ಲ. ಇನ್ನೂ ಬೇಕಾದಷ್ಟು ಪ್ರಶ್ನೆಗಳು ಇವೆ. ತಾವು ಕಂಠಿತುಕೊಳ್ಳಬೇಕು. ಶ್ರೀ ವಿ. ಗುತ್ತೇದಾರ್ ರವರೇ ತಾವು ಪ್ರಶ್ನೆ ಕೇಳಿ.

ಗುಲ್ಬರ್ಗಾ ಜಿಲ್ಲೆಯಲ್ಲಿ ಶಾಲೆಗಳು ಬಾಡಿಗೆ ಕಟ್ಟಡದಲ್ಲಿ ಇರುವ ಬಗ್ಗೆ

೧೩೪. ಶ್ರೀ ಮಾಲಿಕಯ್ಯ ವಿ. ಗುತ್ತೇದಾರ್ (ಅಫಜಲ್‌ಪುರ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ಎಷ್ಟು ಶಾಲೆಗಳು ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿವೆ,

ಆ) ಎಷ್ಟು ಶಾಲೆಗಳಿಗಾಗಿ ಕಟ್ಟಡವನ್ನು ಸರ್ಕಾರದವರು ಪ್ರಸ್ತುತ ಕಟ್ಟಿಸುತ್ತಿದ್ದಾರೆ,

ಇ) ಈ ಕಟ್ಟಡಗಳನ್ನು ಯಾವಾಗ ಪೂರ್ತಿಗೊಳಿಸಲಾಗುವುದು ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

ಅ) ೫೩ ಸರ್ಕಾರಿ ಪ್ರಾಥಮಿಕ/ಮಾಧ್ಯಮಿಕ ಶಾಲೆಗಳು ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿವೆ.

ಆ) ಒಂದು ಪ್ರಾಥಮಿಕ ಶಾಲೆ, ಒಂದು ಪ್ರೌಢಶಾಲೆ, ಒಂದು ಕಿರಿಯ ಮಹಾವಿದ್ಯಾಲಯ.

ಇ) ಮುಂದಿನ ಎರಡು-ಮೂರು ವರ್ಷಗಳಲ್ಲಿ ಪೂರ್ತಿಗೊಳಿಸಲಾಗುವುದು.

ಶ್ರೀ ಮಾಲಿಕಯ್ಯ ವಿ. ಗುತ್ತೇದಾರ್.—ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ಈ ಪ್ರಶ್ನೆಯಂ(ಅ)ಗೆ ಉತ್ತರವಾಗಿ ೫೩ ಸರ್ಕಾರಿ ಪ್ರಾಥಮಿಕ, ಮಾಧ್ಯಮಿಕ ಶಾಲೆಗಳು ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿವೆ ಎಂದು ಹೇಳಿದರು. ಇದನ್ನು ಎಷ್ಟು ವರ್ಷದೊಳಗೆ ಮುಗಿಸುತ್ತೇವೆಂದು ಹೇಳುವುದಕ್ಕೆ ಸಾಧ್ಯವೇ ?

ಶ್ರೀ ಡಿ. ಮಂಜುನಾಥ್.—ಇಷ್ಟೇ ವರ್ಷದಲ್ಲಿ ಮುಗಿಸುತ್ತೇವೆಂದು ಹೇಳುವುದಕ್ಕೆ ಕಷ್ಟವಾಗುತ್ತದೆ.

ಶ್ರೀ ಕೆ.ಬಿ. ಶಾಣಪ್ಪ.—ಸರ್ಕಾರೀ ಸ್ಕೂಲುಗಳನ್ನು ನಡೆಸುವುದಕ್ಕೆ ಅನೇಕ ಭಾಗಗಳಲ್ಲಿ ಖಾಸಗೀ ಕಟ್ಟಡಗಳನ್ನು ಬಾಡಿಗೆಗೆ ತೆಗೆದುಕೊಂಡಿದ್ದಾರೆ, ಇವರು ಎಲ್ಲಾ ಭಾಗದಲ್ಲೂ ಕಟ್ಟಡವನ್ನು ಕಟ್ಟಬೇಕಾದರೆ ನಿಧಾನವಾಗುತ್ತದೆ. ಈಗ ಇದರಲ್ಲಿ ಒಂದು ಪ್ರಾಬ್ಲಮ್ ಇದೆ. ಹಿಂದೆ ಶಿಕ್ಷಣ ರಾಜ್ಯ ಮಂತ್ರಿ